All India Radio: Bangalore
National Bulletin In Kannada

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

07.02.2025 : 13.10hrs

**ಮುಖ್ಯಾಂಶಗಳು**

1. ಐದು ವರ್ಷಗಳ ನಂತರ ರೆಪೊ ದರವನ್ನು ೨೫ ಮೂಲಾಂಶ ಕಡಿತದೊಂದಿಗೆ ಶೇಕಡ ೬.೨೫ಕ್ಕೆ ಇಳಿಸಿದ ಭಾರತೀಯ ರಿಸರ್ವ್ ಬ್ಯಾಂಕ್
2. ಬುಡಕಟ್ಟು ಪ್ರದೇಶಗಳಲ್ಲಿ ಆರೋಗ್ಯ ಸೌಲಭ್ಯ ಸುಧಾರಿಸುವತ್ತ ಕೇಂದ್ರ ಸರ್ಕಾರ ವಿಶೇಷ ಗಮನ
3. ದೆಹಲಿ ವಿಧಾನಸಭಾ ಚುನಾವಣೆ; ನಾಳೆಯ ಮತ ಎಣಿಕೆಗೆ ಭರದ ಸಿದ್ಧತೆ
4. ಒಂಬತ್ತನೇ ಆವೃತ್ತಿಯ ಏಷ್ಯನ್ ಚಳಿಗಾಲದ ಕ್ರೀಡಾಕೂಟ; ಚೀನಾದ ಹಾರ್ಬಿನ್‌ನಲ್ಲಿಂದು ಆರಂಭ

******

ಭಾರತೀಯ ರಿಸರ್ವ್ ಬ್ಯಾಂಕ್ ಇಂದು ಸುಮಾರು ಐದು ವರ್ಷಗಳಲ್ಲಿ ಮೊದಲ ಬಾರಿಗೆ ಬಡ್ಡಿದರವನ್ನು ಕಡಿಮೆ ಮಾಡಿದೆ. ಆರ್‌ಬಿಐನ ಹಣಕಾಸು ನೀತಿ ಸಮಿತಿ- ಎಂಪಿಸಿ ನೀತಿ ದರವನ್ನು ೨೫ ಬೇಸಿಸ್ ಪಾಯಿಂಟ್‌ಗಳಿಂದ ಕಡಿತಗೊಳಿಸಲು ಸರ್ವಾನುಮತದಿಂದ ನಿರ್ಧರಿಸಿದೆ. ಈ ಕುರಿತು ಮಾತನಾಡಿರುವ ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ, ಭಾರತೀಯ ರಿಸರ್ವ್ ಬ್ಯಾಂಕ್ ನೀತಿ ರೆಪೊ ದರವನ್ನು ಶೇಕಡಾ ೬.೫ ರಿಂದ ಶೇಕಡಾ ೬.೨೫ಕ್ಕೆ ಇಳಿಸಿದೆ. ಪರಿಣಾಮವಾಗಿ, ಸ್ಥಿರ ಠೇವಣಿ ಸೌಲಭ್ಯ- ಎಸ್‌ಡಿಎಫ್ ದರ ಶೇಕಡಾ ೬.೦ ಮತ್ತು ಮಾರ್ಜಿನಲ್ ಸ್ಟ್ಯಾಂಡಿಂಗ್ ಪೆಸಲಿಟಿ- ಎಂಎಸ್‌ಎಫ್ ದರ ಮತ್ತು ಬ್ಯಾಂಕ್ ದರವು ಶೇಕಡಾ ೬.೫ ರಷ್ಟಿರುತ್ತದೆ ಎಂದಿದ್ದಾರೆ. ಮೇ ೨೦೨೦ ರಲ್ಲಿ ಕೊನೆಯ ದರ ಕಡಿತದ ನಂತರ ೨೫ ಬೇಸಿಸ್ ಪಾಯಿಂಟ್‌ಗಳ ದರವನ್ನು ಶೇಕಡಾ ೬.೨೫ ಕ್ಕೆ ಇಳಿಸಲಾಗಿದೆ. ದರಗಳ ಕೊನೆಯ ಪರಿಷ್ಕರಣೆ ಫೆಬ್ರವರಿ ೨೦೨೩ ರಲ್ಲಿ ಆಗಿತ್ತು. ಆಗ ನೀತಿ ದರವನ್ನು ೨೫ ಬೇಸಿಸ್ ಪಾಯಿಂಟ್ ಹೆಚ್ಚಳದೊಂದಿಗೆ ಶೇಕಡಾ ೬.೫ ಕ್ಕೆ ಏರಿಸಲಾಗಿತ್ತು.

************

ಬುಡಕಟ್ಟು ಪ್ರದೇಶಗಳಲ್ಲಿ ಆರೋಗ್ಯ ಸೌಲಭ್ಯವನ್ನು ಸುಧಾರಿಸುವತ್ತ ವಿಶೇಷ ಗಮನ ನೀಡಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಲೋಕಸಭೆಯಲ್ಲಿಂದು ಪೂರಕ ಪ್ರಶ್ನೆಗಳಿಗೆ ಉತ್ತರಿಸಿದ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಜೆ.ಪಿ.ನಡ್ಡಾ, ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳ ಸಹಕಾರದೊಂದಿಗೆ ಕೇಂದ್ರ ಸರ್ಕಾರ ಪ್ರತಿಯೊಬ್ಬ ಭಾರತೀಯ ನಾಗರಿಕರು ವಿಶೇಷವಾಗಿ ಬುಡಕಟ್ಟು ಪ್ರದೇಶಗಳಲ್ಲಿರುವವರು ಅತ್ಯುತ್ತಮ ವೈದ್ಯಕೀಯ ಸೌಲಭ್ಯಗಳನ್ನು ಪಡೆಯುವುದನ್ನು ಖಾತರಿ ಪಡಿಸಿಕೊಳ್ಳುತ್ತಿದೆ ಎಂದು ಹೇಳಿದರು. ಇದಕ್ಕೂ ಮುನ್ನ ಪೂರಕ ಪ್ರಶ್ನೆಗಳಿಗೆ ಉತ್ತರಿಸಿದ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ರಾಜ್ಯ ಸಚಿವೆ, ಅನುಪ್ರಿಯ ಪಟೇಲ್, ಕಳೆದ ೩೦ ವರ್ಷಗಳಲ್ಲಿ ತಾಯಂದಿರ ಮರಣ ಪ್ರಮಾಣ ಶೇಕಡ ೪೨ರಷ್ಟು ಕುಸಿದಿದ್ದರೆ, ಭಾರತದಲ್ಲಿ ಈ ಪ್ರಮಾಣದಲ್ಲಿ ಶೇಕಡ ೮೩ರಷ್ಟು ಕುಸಿತ ಕಂಡು ಬಂದಿದೆ ಎಂದು ಮಾಹತಿ ನೀಡಿದೆ. ಈ ನಡುವೆ, ಲೋಕಸಭೆಯಲ್ಲಿಂದು ಶ್ರೀಲಂಕಾ ಅಧಿಕಾರಿಗಳು ತಮಿಳುನಾಡು ಮೀನುಗಾರರನ್ನು ಬಂಧಿಸಿರುವ ವಿಷಯವನ್ನು ಮುಂದಿಟ್ಟಿಕೊಂಡು ಹಲವು ಪ್ರತಿಪಕ್ಷಗಳ ಸಂಸದರು ಪ್ರತಿಭಟನೆ ನಡೆಸಿದರು. ಮಾಧ್ಯಮಗಳೊಂದಿಗೆ ಮಾತನಾಡಿದ ಡಿಎಂಕೆ ನಾಯಕಿ ಕನಿಮೊಳಿ, ಶ್ರೀಲಂಕಾ ಅಧಿಕಾರಿಗಳು ಸುಮಾರು ೯೭ ಮೀನುಗಾರರನ್ನು ಬಂಧಿಸಿದ್ದು, ಅವರನ್ನು ಮರಳಿ ಕರೆತರಲು ಕ್ರಮವಹಿಸಬೇಕಿದೆ ಎಂದು ಹೇಳಿದರು.

************

ಕಳೆದ ವರ್ಷದ ಅಂತ್ಯದ ವೇಳೆಗೆ ೪ ಸಾವಿರದ ೩೦೦ಕ್ಕೂ ಹೆಚ್ಚು ಕೃಷಿ ಉತ್ಪಾದಕರ ಸಂಸ್ಥೆಗಳು ಇ-ನಾಮ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡಿದೆ ಮತ್ತು ೪ ಕೋಟಿ ೮೦ ಲಕ್ಷಕ್ಕೂ ಹೆಚ್ಚು ರೈತರು ೨೪೯ ಕೋಟಿ ರೂಪಾಯಿಗಳ ಪಾವತಿಯನ್ನು ಪಡೆದಿದ್ದಾರೆ ಎಂದು ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ. ರಾಜ್ಯಸಭೆಯಲ್ಲಿಂದು ಪೂರಕ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ದೇಶಾದ್ಯಂತ ಇಲ್ಲಿವರೆಗೆ ೧೦ ಸಾವಿರಕ್ಕೂ ಹೆಚ್ಚು ಕೃಷಿ ಉತ್ಪಾದಕರ ಸಂಸ್ಥೆಗಳು ಸ್ಥಾಪನೆಯಾಗಿವೆ. ದೇಶಾದ್ಯಂತ ೧ ಸಾವಿರಕ್ಕೂ ಹೆಚ್ಚು ಮಾರುಕಟ್ಟೆಗಳು ಇ-ನಾಮ್ ಪೋರ್ಟಲ್‌ಗೆ ಸೇರ್ಪಡೆಗೊಂಡಿವೆ. ಅಂತಾರಾಜ್ಯ ವ್ಯವಹಾರಕ್ಕಾಗಿ ೨೨ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಈ ಪೋರ್ಟಲ್‌ನೊಂದಿಗೆ ಕೈಜೋಡಿಸಿದ್ದು,

ಅಂತಾರಾಜ್ಯದ ವ್ಯಾಪಾರದಡಿಯಲ್ಲಿ ಸುಮಾರು ೬ ಸಾವಿರ ಕೋಟಿ ರೂಪಾಯಿಗಳನ್ನು ನೇರವಾಗಿ ರೈತರಿಗೆ ಪಾವತಿಸಲಾಗಿದೆ ಎಂದು ಸಚಿವರು ಮಾಹಿತಿ ನೀಡಿದರು.

************

ಗ್ರಾಹಕರ ಕುಂದು ಕೊರತೆಗಳ ಪರಿಹಾರದ ಪ್ರಕ್ರಿಯೆಗಳನ್ನು ಮತ್ತಷ್ಟು ಸುಗಮಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಗ್ರಾಹಕ ವ್ಯವಹಾರಗಳ ಇಲಾಖೆ ಕುಂದುಕೊರತೆಗಳ ವಲಯವಾರು ವಿಶ್ಲೇಷಣೆ ನೀಡುವ ಕೃತಕ ಬುದ್ಧಿಮತ್ತೆ ಆಧಾರಿತ ರಾಷ್ಟ್ರೀಯ ಗ್ರಾಹಕ ಸಹಾಯವಾಣಿ ವ್ಯವಸ್ಥೆಯನ್ನು ಅಳವಡಿಸಿಕೊಂಡಿದೆ. ಈ ಹೊಸ ತಂತ್ರಜ್ಞಾನ ಚಾಲಿತ ವಿಧಾನ ಗ್ರಾಹಕರ ಸಮಸ್ಯೆಗಳನ್ನು ಪ್ರಮುಖವಾಗಿ, ಶಿಕ್ಷಣ ಕ್ಷೇತ್ರದ ಸಮಸ್ಯೆಗಳನ್ನು ದಕ್ಷವಾಗಿ ಹಾಗೂ ಶೀಘ್ರವಾಗಿ ಪರಿಹರಿಸುವ ಗುರಿ ಹೊಂದಿದೆ.

************

ನಾಳೆ ನಡೆಯಲಿರುವ ದೆಹಲಿ ವಿಧಾನಸಭಾ ಚುನಾವಣೆಯ ಮತ ಎಣಿಕೆಗೆ ಎಲ್ಲಾ ಸಿದ್ಧತೆಗಳು ಭರದಿಂದ ಸಾಗಿವೆ. ಸುಗಮ ಮತ್ತು ನ್ಯಾಯಯುತ ಎಣಿಕೆ ಪ್ರಕ್ರಿಯೆಗೆ ಎಲ್ಲಾ ವ್ಯವಸ್ಥೆಗಳನ್ನು ಮಾಡಲಾಗಿದೆ ಎಂದು ದೆಹಲಿಯ ಮುಖ್ಯ ಚುನಾವಣಾಧಿಕಾರಿ ಆರ್. ಆಲಿಸ್ ವಾಜ್ ತಿಳಿಸಿದ್ದಾರೆ. ೭೦ ವಿಧಾನಸಭಾ ಕ್ಷೇತ್ರಗಳ ನಮೂನೆ ೧೭ಅ ಸೇರಿದಂತೆ ಚುನಾವಣಾ ದಾಖಲೆಗಳ ಪರಿಶೀಲನೆ ನಡೆಸಲಾಗಿದೆ ಎಂದು ದೆಹಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮಾಹಿತಿ ನೀಡಿದರು. ಚುನಾವಣಾ ಆಯೋಗದಿಂದ ನೇಮಿಸಲ್ಪಟ್ಟ ಸ್ವತಂತ್ರ ಕೇಂದ್ರ ವೀಕ್ಷಕರು, ಅಭ್ಯರ್ಥಿಗಳು ಮತ್ತು ಅವರ ಏಜೆಂಟ್‌ಗಳು ಮತ್ತು ರಿಟರ್ನಿಂಗ್ ಅಧಿಕಾರಿಗಳು ಪರಿಶೀಲನೆಯ ಸಮಯದಲ್ಲಿ ಹಾಜರಿದ್ದರು ಎಂದು ಅವರು ಹೇಳಿದರು. ಪರಿಶೀಲನೆ ಪ್ರಕ್ರಿಯೆಯಲ್ಲಿ ಯಾವುದೇ ಅಭ್ಯರ್ಥಿಯಿಂದ ಯಾವುದೇ ದೂರು ಬಂದಿಲ್ಲ ಎಂದು ಅವರು ಹೇಳಿದರು. ಆಯೋಗ ಮತ್ತು ಪೊಲೀಸ್ ಅಧಿಕಾರಿಗಳ ನಿರಂತರ ಕಣ್ಗಾವಲಿನಲ್ಲಿ ಇವಿಎಂಗಳನ್ನು ಸ್ಟ್ರಾಂಗ್ ರೂಮ್‌ಗಳಲ್ಲಿ ಇರಿಸಲಾಗಿದೆ. ಮತ ಎಣಿಕೆಗಾಗಿ ದೆಹಲಿಯ ೧೧ ಜಿಲ್ಲೆಗಳಲ್ಲಿ ಹತ್ತೊಂಬತ್ತು ಎಣಿಕೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಎಣಿಕೆ ಮೇಲ್ವಿಚಾರಕರು, ಎಣಿಕೆ ಸಹಾಯಕರು, ಮೈಕ್ರೋ ವೀಕ್ಷಕರು, ಸಂಖ್ಯಾಶಾಸ್ತ್ರೀಯ ಸಿಬ್ಬಂದಿ ಮತ್ತು ಇತರ ಸಹಾಯಕ ಸಿಬ್ಬಂದಿ ಸೇರಿದಂತೆ ಸುಮಾರು ಐದು ಸಾವಿರ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಮತ್ತು ಎಣಿಕೆ ಪ್ರಕ್ರಿಯೆಗೆ ತರಬೇತಿ ನೀಡಲಾಗಿದೆ ಎಂದು ಚುನಾವಣಾಧಿಕಾರಿ ಹೇಳಿದರು.

************

ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಮಹಾಕುಂಭ ಮೇಳದಲ್ಲಿ ಇಂದು ಸಂಜೆ ಕೇಂದ್ರ ಸಂಸ್ಕೃತಿ ಸಚಿವಾಲಯದಿಂದ ಭವ್ಯ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿ ದೇಶದ ವಿವಿಧ ಭಾಗಗಳಿಂದ ಆಗಮಿಸುವ ಕಲಾವಿದರು ಸಂಗೀತ ನೃತ್ಯ ಮತ್ತು ಕಲೆಯ ಅದ್ಭುತ ಪ್ರಸ್ತುತಿಗಳೊಂದಿಗೆ ಭಕ್ತ ಸಮೂಹವನ್ನು ಮನರಂಜಿಸಲಿದ್ದಾರೆ. ಗಂಗಾ ಪಂಡಲ್‌ನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಒಡಿಸ್ಸಿ ನೃತ್ಯ ಕಲಾವಿದ ಸೋನಲ್ ಮಾನ್‌ಸಿಂಗ್, ದೋನಾ ಗಂಗೂಲಿ, ಗಾಯಕಿ ಕವಿತಾ ಕೃಷ್ಣಮೂರ್ತಿ ಹರಿಹರನ್ ಮತ್ತು ಸುರೇಶ್ ವಾಡ್‌ಕರ್ ಕಾರ್ಯಕ್ರಮ ಪ್ರಸ್ತುತಪಡಿಸಲಿದ್ದಾರೆ.

************

ಕಲೆ, ಕರಕುಶಲ ವಸ್ತುಗಳು ಸಂಗೀತ ಮತ್ತು ಸಾಂಸ್ಕೃತಿಕ ಪರಂಪರೆಯ ಸಂಗಮವಾದ ೩೮ನೇ ಸೂರಜ್ ಕುಂಡ್ ಅಂತಾರಾಷ್ಟ್ರೀಯ ಕರಕುಶಲ ಮೇಳಕ್ಕೆ ಹರಿಯಾಣದ ಫರೀದಾಬಾದ್‌ನಲ್ಲಿಂದು ಚಾಲನೆ ದೊರೆತಿದೆ. ಮೇಳವನ್ನು ಕೇಂದ್ರ ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಮತ್ತು ಹರಿಯಾಣದ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ ಉದ್ಘಾಟಿಸಿದರು.

************

೨೦೨೬ರ ಹಣಕಾಸು ವರ್ಷಕ್ಕೆ ಅಮೆರಿಕಾದ ಎಚ್-೧ ಬಿ ವೀಸಾಗಳ ಆರಂಭಿಕ ನೋಂದಣಿಯ ಅವಧಿ ಮಾರ್ಚ್ ೭ ರಿಂದ ಆರಂಭವಾಗಿ, ಮಾರ್ಚ್ ೨೪ ರಂದು ಮುಕ್ತಾಯವಾಗಲಿದೆ. ಆಸಕ್ತ ಅರ್ಜಿದಾರರು ಮತ್ತು ಪ್ರತಿನಿಧಿಗಳು ಪ್ರತಿ ನೋಂದಣಿಯನ್ನು ಯುಎಸ್‌ಸಿಐಎಸ್ ಆನ್‌ಲೈನ್ ಖಾತೆಯ ಮೂಲಕಯ ಮೂಲಕ ನಿರ್ವಹಿಸಿ, ಅಗತ್ಯ ಸಂಬಂಧಿಸಿದ ನೋಂದಣಿ ಶುಲ್ಕವನ್ನು ಆನ್‌ಲೈನ್ ಮೂಲಕವೇ ಪಾವತಿಸಬೇಕು ಎಂದು ಅಮೆರಿಕಾ ಪೌರತ್ವ ಮತ್ತು ವಲಸೆ ಸೇವೆ ವಿಭಾಗ ತಿಳಿಸಿದೆ.

************

ಒಂಬತ್ತನೇ ಆವೃತ್ತಿಯ ಏಷ್ಯನ್ ಚಳಿಗಾಲದ ಕ್ರೀಡಾಕೂಟ- ೨೦೨೫ ಇಂದು ಸಂಜೆ ಚೀನಾದ ಹಾರ್ಬಿನ್‌ನಲ್ಲಿ ಆರಂಭವಾಗಲಿದೆ. ಈ ತಿಂಗಳ ೧೪ ರವರೆಗೆ ಕ್ರೀಡಾಕೂಟ ನಡೆಯಲಿದ್ದು, ಈ ವರ್ಷದ ಕ್ರೀಡಾಕೂಟದಲ್ಲಿ ಇತಿಹಾಸದಲ್ಲಿಯೇ ಅತೀ ಹೆಚ್ಚು ಏಷ್ಯನ್ ದೇಶಗಳು ಭಾಗವಹಿಸಲಿವೆ ಮತ್ತು ಏಷ್ಯಾದಾದ್ಯಂತ ೩೪ ದೇಶಗಳ ಪ್ರತಿನಿಧಿಗಳು ಉದ್ಘಾಟನಾ ಸಮಾರಂಭದಲ್ಲಿ ಮೆರವಣಿಗೆ ನಡೆಸಲಿದ್ದಾರೆ ಎಂದು ಕ್ರೀಡಾಕೂಟದ ಸಂಘಟನಾ ಸಮಿತಿಯ ಉಪ ಪ್ರಧಾನ ಕಾರ್ಯದರ್ಶಿ ಮತ್ತು ಮುಖ್ಯ ವಕ್ತಾರರು ಹೇಳಿದ್ದಾರೆ. ಭಾರತದಲ್ಲಿ ಚಳಿಗಾಲದ ಕ್ರೀಡೆಗಳನ್ನು ಬೆಳೆಸುವ ಕ್ರಮವಾಗಿ, ಏಷ್ಯನ್ ಚಳಿಗಾಲದ ಕ್ರೀಡಾಕೂಟದಲ್ಲಿ ಭಾರತೀಯ ತಂಡ ಭಾಗವಹಿಸಲು ಸರ್ಕಾರ ಅನುಮೋದನೆ ನೀಡಿದೆ. ೫೯ ಕ್ರೀಡಾಪಟುಗಳು ಮತ್ತು ೨೯ ತಂಡದ ಅಧಿಕಾರಿಗಳನ್ನು ಒಳಗೊಂಡ ಒಟ್ಟು ೮೮ ಸದಸ್ಯರ ಭಾರತೀಯ ತಂಡ ಭಾಗವಹಿಸಲು ಸರ್ಕಾರ ಅನುಮತಿ ನೀಡಿದೆ. ಮೊದಲ ಬಾರಿಗೆ, ಆಲ್ಪೈನ್ ಸ್ಕೀಯಿಂಗ್, ಕ್ರಾಸ್-ಕಂಟ್ರಿ ಸ್ಕೀಯಿಂಗ್, ಫಿಗರ್ ಸ್ಕೇಟಿಂಗ್, ಶಾರ್ಟ್ ಟ್ರ್ಯಾಕ್ ಸ್ಪೀಡ್ ಸ್ಕೇಟಿಂಗ್ ಮತ್ತು ಸ್ಪೀಡ್ ಸ್ಕೇಟಿಂಗ್ (ಲಾಂಗ್ ಟ್ರ್ಯಾಕ್) ನಲ್ಲಿ ಸ್ಪರ್ಧಿಸುವ ಕ್ರೀಡಾಪಟುಗಳಿಗೆ ರಾಷ್ಟ್ರೀಯ ಕ್ರೀಡಾ ಒಕ್ಕೂಟಗಳಿಗೆ ಸಹಾಯ (ANSF)ಯೋಜನೆಯಡಿಯಲ್ಲಿ ಸಂಪೂರ್ಣ ಆರ್ಥಿಕ ನೆರವು ನೀಡಲಾಗುತ್ತಿದೆ.

************

ಮುಂಬೈನಲ್ಲಿ ನಡೆಯುತ್ತಿರುವ ಡಬ್ಲ್ಯೂಟಿಎ ಮುಂಬೈ ಓಪನ್ ಟೆನಿಸ್ ಟೂರ್ನಿಯಲ್ಲಿ ಭಾರತದ ಶ್ರೀವಲ್ಲಿ ರಶ್ಮಿಕಾ ಭಾಮಿಡಿಪತಿ ಹಾಗೂ ಮಾಯಾ ರಾಜೇಶ್ವರನ್ ಕ್ವಾಟರ್ ಫೈನಲ್ಸ್ ಪ್ರವೇಶಿಸಿದ್ದಾರೆ.

************

ಚೆನ್ನೈ ಓಪನ್ ಚಾಲೆಂಜರ್ ಟೆನ್ನಿಸ್ ಪಂದ್ಯದಲ್ಲಿ ಇಂದು ಸಂಜೆ ಭಾರತದ ಎರಡು ಪುರುಷರ ಡಬಲ್ಸ್ ಜೋಡಿಗಳು ಸೆಮಿಫೈನಲ್‌ನಲ್ಲಿ ಸೆಣಸಲಿವೆ. ಮೊದಲ ಸೆಮಿಫೈನಲ್‌ನಲ್ಲಿ, ಸಾಕೇತ್ ಮೈನೇನಿ ಮತ್ತು ರಾಮಕುಮಾರ್ ರಾಮನಾಥನ್ ಜೋಡಿ ಅಗ್ರ ಶ್ರೇಯಾಂಕಿತರಾದ ತೈವಾನ್‌ನ ರೇ ಹೋ ಮತ್ತು ಆಸ್ಟ್ರೇಲಿಯಾದ ಮ್ಯಾಥ್ಯೂ ಕ್ರಿಸ್ಟೋಫರ್ ರೊಮಿಯೊಸ್ ಅವರನ್ನು ಎದುರಿಸಲಿದೆ. ಪಂದ್ಯ ಮಧ್ಯಾಹ್ನ ೩.೩೦ ಕ್ಕೆ ಆರಂಭವಾಗಲಿದೆ.

******END******